ಕನ್ನಡ ಬೌದ್ಧಸಾಹಿತ್ಯ ಕೃತಿ ಶ್ರೇಣಿ ೬



# ಬೌದ್ಧ ಮಾನವಿಕ ಸಂಪುಟ

ಸಂಪಾದಕ

ಡಾ. ಶಿವಾನಂದ ಕೆಳಗಿನಮನಿ

Scanned with CamScanner

**BOUDDHA MANAVIKA SAMPUTA :** Editor: Dr. Shivananda Kelaginamani, Chief Editor: Prof. H.T. Pote, Director, Institute of Kannada Studies and Institute of Pali and Buddhist Studies, Gulbarga University, Kalaburagi. Published by Institute of Pali and Buddist Studies, Gulbarga University, Kalaburagi.

**ಬೌದ್ಧ ಮಾನವಿಕ ಸಂಪುಟ**

ಪ್ರಧಾನ ಸಂಪಾದಕರು: **ಪ್ರೊ. ಎಚ್.ಟಿ. ಪೋತೆ**
ಪ್ರಾಧ್ಯಾಪಕರು ಹಾಗೂ ನಿರ್ದೇಶಕರು
ಕನ್ನಡ ಅಧ್ಯಯನ ಸಂಸ್ಥೆ
ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಸಂಪಾದಕರು : **ಡಾ. ಶಿವಾನಂದ ಕೆಳಗಿನಮನಿ**

First Edition : 2020
Pages : xlvi + 244 = 290
© : Institute of Pali and Buddhist Studies,
Gulbarga University, Kalaburagi.
Paper used : 80 gsm N.S. Maplitho
Price : **Rs. 300/-**

ಪ್ರಥಮ ಮುದ್ರಣ : ೨೦೨೦
ಪುಟಗಳು : xlvi + 244 = 290
© : ಪಾಲಿ ಮತ್ತು ಬೌದ್ಧ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ಬಳಸಿದ ಕಾಗದ : ೮೦ gsm. ಎನ್.ಎಸ್. ಮ್ಯಾಪಲಿಥೋ
ಬೆಲೆ : **ರೂ. ೩೦೦/-**

ಮುದ್ರಣ
**ಇಳಾ ಗ್ರಾಫಿಕ್ಸ್**
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
ದೂರವಾಣಿ : ೨೬೭೫೫೭೮೫

Scanned with CamScanner

# ಬುದ್ಧನತ್ತ ಅಂಬೇಡ್ಕರ್ : ಅರ್ಧ ಶತಮಾನ

◆ ಎಸ್. ನರೇಂದ್ರಕುಮಾರ್

'ಧರ್ಮ ಇರುವುದು ಮನುಷ್ಯನಿಗಾಗಿ, ಮನುಷ್ಯನಿರುವುದು ಧರ್ಮಕ್ಕಲ್ಲ ಎಂಬ ದೃಢ ನಿಲುವಿನ ಅಂಬೇಡ್ಕರ್ ಬೌದ್ಧ ಧಮ್ಮವನ್ನು ದಿಢೀರನೇ ಸ್ವೀಕರಿಸಿದ್ದಲ್ಲ. ಅವರು ಬುದ್ಧನತ್ತ ಸಾಗಲು ತೆಗೆದುಕೊಂಡ ಅವಧಿ ಸರಿಸುಮಾರು ಇಪ್ಪತ್ತೊಂದು ವರ್ಷ.

೧೯೩೫ರ ಅಕ್ಟೋಬರ್ ೧೩ರಂದು ನಾಸಿಕ್‌ನ ಇಯೋಲಾದಲ್ಲಿ ನಡೆದ ನಿಮ್ನ ವರ್ಗಗಳ ಬೃಹತ್ ಬಹಿರಂಗ ಸಭೆಯಲ್ಲಿ 'ನಾನು ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ' ಎಂದು ನಿಖರವಾಗಿ ಹೇಳಿದ ಅಂಬೇಡ್ಕರ್ ೧೯೫೬ರ ಅಕ್ಟೋಬರ್ ೧೪ರಂದು ನಾಗಪುರದಲ್ಲಿ ತಮ್ಮ ಲಕ್ಷಾಂತರ ಸಂಗಡಿಗರೊಡನೆ ಬುದ್ಧ ನೆಡೆಗೆ ನಡೆದರು.

೧೯೩೫ರಿಂದ ೧೯೫೬ರ ಈ ಅವಧಿಯಲ್ಲಿ ತಮ್ಮ ಹೋರಾಟ, ರಾಜಕಾರಣ ಮುಂತಾದ ಬಿಡುವಿಲ್ಲದ ಕೆಲಸಗಳ ಒತ್ತಡಗಳ ನಡುವೆಯೂ ಬೇರೆ ಬೇರೆ ಧರ್ಮಗಳ ಬಗೆಗಿನ ಸಾವಿರಾರು ಗ್ರಂಥಗಳನ್ನು ಸಹನೆಯಿಂದ ಅಧ್ಯಯನ ಮಾಡುತ್ತಾರೆ; ಸಂಶೋಧನೆ ನಡೆಸುತ್ತಾರೆ. ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಯ ಕರಾಳ ಅನುಭವಗಳ ಅರಿವಿದ್ದ ಹಾಗೂ "ಶೋಷಿತ ವರ್ಗದವರಿಗೆ ಬೇಕಾಗಿರುವುದು ಸಾಮಾಜಿಕ ಸ್ಥಾನಮಾನಗಳಲ್ಲಿ ಸಮಾನತೆ ಕಲ್ಪಿಸುವಂಥ ಒಂದು ಧರ್ಮ ।(ಗಾಂಧೀಜಿ ಮತ್ತು ಅವರ ಉಪವಾಸ ಸತ್ಯಾಗ್ರಹ ಲೇಖನದಲ್ಲಿ) ಎಂಬ ನಿರ್ಧಾರದ ಅಂಬೇಡ್ಕರ್ ಅವರು ಅಂತಿಮವಾಗಿ ಶೋಷಿತರ ವಿಮೋಚನೆಯ ದಿಕ್ಕಾಗಬಹುದಾದ ಬೆಳಕೆಂದರೆ ಬುದ್ಧ ಮತ್ತು ಆತನ ಚಿಂತನೆಗಳೆಂದು ಖಚಿತವಾಗಿ ನಿರ್ಣಯಿಸುತ್ತಾರೆ. ಬುದ್ಧನ ಜೀವಪರವಾದ ಅಪಾರ ಕರುಣೆಯ ಪ್ರೇಮತತ್ವಗಳು ಅಂಬೇಡ್ಕರರಿಗೆ ಇಷ್ಟವಾಗುತ್ತವೆ.

Scanned with CamScanner